ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ ಇವರು ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿಗೆ ಮುಳುಗಡೆಯಾದ ಬಾಗಲಕೋಟೆ ನಗರ ಸಂತ್ರಸ್ಥರಿಗಾಗಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸಲು ನವನಗರದ ನಿರ್ಮಾಣ ಕಾರ್ಯ ನಡೆದಿದ್ದು, ಈ ವರೆಗೆ ಸಾವಿರಾರು ಕೋಟಿ ಬಿಡುಗಡೆಗೊಂಡಿದ್ದರೂ ಸಂತ್ರಸ್ಥರ ಬದುಕು ಹಸನಗೊಂಡಿಲ್ಲ. ಸಂತ್ರಸ್ಥರ ಪರಿಹಾರಕ್ಕಿಂತ ನೂರು ಪಟ್ಟು ಅನುದಾನ ಮೂಲ ಸೌಕರ್ಯಕ್ಕೆ ಖರ್ಚಾಗಿದ್ದರೂ ಸಮಸ್ಯೆಗಳಿಗೆ ಮುಕ್ತಿ ಸಿಕ್ಕಿಲ್ಲ. ಕಾಮಗಾರಿ ನೆಪದಲ್ಲಿ ಅಧಿಕಾರಿಗಳು, ಇಂಜಿನೀಯರ್‌ಗಳು ಕೋಟ್ಯಾಂತರ ರೂಗಳ ಅವ್ಯವಹಾರ ನಡೆಸಿದ್ದು, ಈಗಲೂ ನಡೆಸುತ್ತಿದ್ದಾರೆ.

ನವನಗರದ ಜನರಿಗಾಗಿ ರೂಪಿಸಲಾಗಿದ್ದ ಕುಡಿಯುವ ನೀರು ಯೋಜನೆಯ ಅಪೂರ್ಣಗೊಂಡಿದ್ದು, ಬಿ.ಟಿ.ಡಿ.ಎ. ಶುದ್ಧ ನೀರಿನ ಶುದ್ಧೀಕರಣ ಘಟಕದ ಪೈಪುಗಳು ಆವರಣದಲ್ಲಿ ತುಕ್ಕು ಹಿಡಿಯುತ್ತಿವೆ. ಪ್ರಾಧಿಕಾರ (ಬಿ.ಟಿ.ಡಿ.ಎ)ದ ಜಮೀನಿನಲ್ಲಿ ಸಂತ್ರಸ್ಥರಿಗಾಗಿ ವಾಸಕ್ಕೆ ಲೇಔಟ ನಿರ್ಮಾಣ ಪೂರ್ಣಗೊಂಡಿಲ್ಲ. ಪ್ರಾಧಿಕಾರ (ಬಿ.ಟಿ.ಡಿ.ಎ)ದ ಉಪ ವಿಭಾಗದ ಉಗ್ರಾಣ ಶಾಖೆಯಲ್ಲಿ ಸಂಗ್ರಹಿಸಿದ ಪಾಳು ಬಿದ್ದಿರುವ ಸಾಮಗ್ರಿಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಈವರೆಗೆ ಗಮನ ಹರಿಸಿಲ್ಲ. ನವನಗರ ಯುನಿಟ್–2 ರಲ್ಲಿನ ವಿದ್ಯುತ್ ಪರಿವರ್ತಕ ಸುತ್ತ ಅಳವಡಿಸಿರುವ ತಂತಿ ಬೇಲಿ ಹಾಗೂ ಕಾಂಕ್ರೀಟ್ ಕಾಮಗಾರಿಯು ದುಸ್ಥಿತಿಯಲ್ಲಿದೆ. ನವನಗರ ಯುನಿಟ್–1 ರಲ್ಲಿ ನಿರ್ಮಿಸಿದ್ದ ಪುಟ್ ಫಾತ ಹಾಗೂ ಪುಟ್ ಫಾತನಲ್ಲಿ ನೆಡಲಾಗಿದ್ದ ಗಿಡಗಳನ್ನು ಏಕಾಏಕಿ ತೆರವುಗೊಳಿಸಿ ರಸ್ತೆ ನಿರ್ಮಿಸಲು ಹೊರಟಿದ್ದಾರೆ. ಯಾವುದೇ ಒಂದು ರಸ್ತೆಗೆ ಅಲ್ಲ ಸಾರ್ವಜನಿಕರ ಓಡಾಟಕ್ಕೆ ಫುಟ್‌ಫಾತ್ ಅತೀ ಅವಶ್ಯಕವಾಗಿದೆ. ಹೀಗಿದ್ದರೂ ಪುಟ್‌ಫಾತ್ ತೆರವುಗೊಳಿಸಿ ರಸ್ತೆ ನಿರ್ಮಿಸಲು ಹೊರಟಿರುವುದು ಹಣನುಂಗುವ ಪ್ರಯತ್ನ ಅಷ್ಟೇ. ತೆರವು ಕಾಮಗಾರಿಗೆ ಮುಕ್ತಿ ಸಿಗುತ್ತಿಲ್ಲ. ಅಳವಡಿಸಿರುವ ಬೀದಿ ದೀಪಗಳು ಕತ್ತಲೆಡೆಗೆ ಸಾಗಿವೆ. ಪ್ರಾಧಿಕಾರದ ಹಣಕಾಸು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ 8 ತಿಂಗಳಿನಿಂದ ವೇತನ ಮಂಜೂರಾಗಿಲ್ಲ. ಹೀಗಿದ್ದರೂ ಸದರಿ ಅಧಿಕಾರಿ ವೇತನ ಇಲ್ಲದೆಯೇ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಇಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಸಂತ್ರಸ್ಥರ ಮನೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು ಭೂಮಿ ಒಳಗೆ ಕೇಬಲ್ ಅಳವಡಿಸಿ ಮನೆಗಳಿಗೆ ಸಂಪರ್ಕ ಕಲ್ಪಿಸುವ ಯೋಜನೆ ರೂಪಿಸಿದ್ದರೂ ಕಾಮಗಾರಿ ಸಂಪೂರ್ಣ ವಿಫಲವಾಗಿದೆ. ಕಾಮಗಾರಿಯ ಪ್ರತಿ ಹಂತದಲ್ಲೂ ಗುಣಮಟ್ಟ ಹಾಳಾಗಿದೆ. ಯೋಜನೆ ರೂಪಿಸುವಾಗ ಎಡವಿದ ಪರಿಣಾಮ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ.

ನವನಗರ ಅಭಿವೃದ್ಧಿ ದೃಷ್ಟಿಯಿಂದ ಅನುದಾನಕ್ಕಾಗಿ ಜನ ಪ್ರತಿನಿಧಿಗಳೂ ಸರ್ಕಾರಕ್ಕೆ ಪರಿಪರಿಯಾಗಿ ಬೇಡಿ ಅನುದಾನ ತಂದರೆ ಪ್ರಾಧಿಕಾರದ ಅಧಿಕಾರಿಗಳು ಅನುದಾನದ ಹಣವನ್ನು ನುಂಗಲು ಬಕಪಕ್ಷಿಯಂತೆ ಕಾಯುತ್ತಿರುತ್ತಾರೆ. ಈ ಅಧಿಕಾರಿಗಳಿಂದಾಗಿ ಯೋಜನೆ ಉದ್ದೇಶಿತ ಗುರಿ ಮುಟ್ಟಲು ಸಾಧ್ಯವಾಗುತ್ತಿಲ್ಲಯಾವುದೇ ಒಂದು ಯೋಜನೆ ಪೂರ್ಣಗೊಂಡಲ್ಲಿ ಅದು ಕನಿಷ್ಟ ಪಕ್ಷ 30 ವರ್ಷಗಳ ದೀರ್ಘಾವಧಿವರೆಗೂ ಬಾಳಿಕೆ ಬರುವಂತಿರಬೇಕು, ಆದರೆ ಇಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪದೇ ಪದೇಕಿತ್ತು ಬದಲಾವಣೆ ಮಾಡುವ ಮೂಲಕ ಯೋಜನೆಯ ಉದ್ದೇಶವೇ ಸಾಕಾರಗೊಳ್ಳದಂತಾಗಿದೆ. ಸರ್ಕಾರ ತಕ್ಷಣ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಯೋಜನೆಯ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಿರುವ ಮತ್ತು ಯೋಜನೆಯ ಕಾಮಗಾರಿಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗಿರುವ ಅಧಿಕಾರಿಗಳ ವಿರುದ್ಧಕ್ರಮ ಕೈಗೊಳ್ಳುವುದರ ಜೊತೆಗೆ ನವನಗರದ ಜನರ ಬದುಕು ಹಸನಗೊಳಿಸಲು ಆದಷ್ಟು ಶೀಘ್ರ ಯೋಜನೆಯ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಎಂಬ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಕ್ಕೆ ಮಾಹಿತಿ.

*****

ಬಾಗಲಕೋಟ ನವನಗರದ ಯುನಿಟ್–1 & 2 ರಲ್ಲಿ ಸಂತ್ರಸ್ಥರಿಗೆ ಪುನರವಸತಿ ಕಲ್ಪಿಸಲು ಮೂಲಭೂತ ಸೌಕರ್ಯಗಳಾದ ನೀರು ಸರಬರಾಜು, ಒಳಚರಂಡಿ, ರಸ್ತೆ ಹಾಗೂ ಬದಿಚರಂಡಿ, ವಿದ್ಯುತ್ತೀಕರಣ ಕಾಮಗಾರಿಗಳನ್ನು ಪಾರದರ್ಶಕವಾಗಿಯೇ ಟೆಂಡರ ಆಧಾರದ ಮೇಲೆ ಇ–ಪ್ರೋಕ್ ಮೂಲಕ ಕೈಗೆತ್ತಿಕೊಂಡು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲಾಗಿರುತ್ತದೆ. ಅನುದಾನದ ಬಳಕೆಯಲ್ಲಿ ಯಾವುದೇ ಅವ್ಯವಹಾರಕ್ಕೆ ಆಸ್ಪದೇ ನೀಡದೇ, ಕಾಲಕಾಲಕ್ಕೆ ಬಿಡುಗಡೆಯಾದ ಅನುದಾನವನ್ನು ಸಂತ್ರಸ್ಥರ ಪುನರವಸತಿಯ ಅನುಮೋದಿತ ಕಾಮಗಾರಿಗಳಿಗೆ ನಿಯಮಾನುಸಾರ ಸಮರ್ಪಕವಾಗಿ ಬಳಸಲಾಗುತ್ತಿದ್ದು, ಪ್ರತಿ ವರ್ಷವು ಅನುದಾನದ ವೆಚ್ಚವನ್ನು ಆಡಿಟ್‌ಗೆ ಒಳಪಡಿಸಲಾಗುತ್ತಿದೆ.

ಹೆರಕಲ್ ಬ್ರಿಡ್ಜ್ ಕಂ ಬ್ಯಾರೇಜ್ ಹತ್ತಿರ ಜಾಕ್‌ವೆಲ್ ಅನ್ನು ನಿರ್ಮಿಸಿ ಹೆಚ್ಚುವರಿಯಾಗಿ ಅವಶ್ಯವಿರುವ 65 MLD ಸಾಮರ್ಥ್ಯದ ನೀರನ್ನು ಎತ್ತಲು ಬಿಟಿಡಿಎ ವತಿಯಿಂದ ಸದರಿ ಕಾಮಗಾರಿಯನ್ನು ರೂ.72.00 ಕೋಟಿಗಳಿಗೆ ಕೈಗೆತ್ತಿಕೊಂಡು ಪಂಪ್‌ಹೌಸ್, ಸಬ್–ಸ್ಟೇಷನ್ ಹಾಗೂ ಇನ್ನಿತರೆ ಅಣೆಕಟ್ಟು ಸಂಬಂಧಿತ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಸರಪಳಿ 14.11 ಕಿ.ಮೀ ನಿಂದ ಕಿ.ಮೀ. 18.67 ಕಿ.ಮೀ ವರೆಗೆ ಆರ್.ಓ.ಡಬ್ಲ್ಯೂ ಬಳಿ ಪೈಪ್‌ಲೈನ್ ಅನ್ನು ಅಳವಡಿಸಲು ರಾಷ್ಟ್ರೀಯ ಹೆದ್ದಾರಿ ಇಲಾಖೆಯ ವತಿಯಿಂದ ಅನುಮತಿ ದೊರೆಯದ ಕಾರಣ ಪೈಪ್‌ಲೈನ್ ಕಾಮಗಾರಿಯನ್ನು

ಮುಂದುವರೆಸಲಾಗಿರುವುದಿಲ್ಲ. ಆದಾಗ್ಯೂ, ಹೆರಕಲ್ ಬ್ರಿಡ್ಜ್ ಕಂ ಬ್ಯಾರೇಜ್ ಹತ್ತಿರ ನಿರ್ಮಿಸಲಾದ ಜಾಕ್‌ವೆಲ್ ನಿಂದ ಕುಡಿಯುವ ನೀರಿಗಾಗಿ 3 ತಿಂಗಳ ಅವಧಿಗೆ (16-ಮಾರ್ಚ್‌ರಿಂದ 15-ಜೂನ್ ವರೆಗೆ) 0.1942 ಟಿ.ಎಂ.ಸಿ. ನೀರನ್ನು ವರ್ಷದ ಹಿಂಗಾರು ಋತುವಿನಲ್ಲಿ ಆನದಿನ್ನಿ ಗ್ರಾಮದ ಹತ್ತಿರ ನಿರ್ಮಿಸಲಾದ ಜಾಕವೆಲ್ ಬನ್ನಿದಿನ್ನಿ ಬ್ಯಾರೇಜಿನ ಹಿನ್ನೀರಿನ ನದಿಗೆ ನೀರನ್ನು ಪೈಪ್‌ಲೈನ್ ಮೂಲಕ ಹರಿಸಲು ಯೋಜಿಸಲಾಗಿದೆ.

ಯುನಿಟ್-02ಕ್ಕೆ ವ್ಯಾಪಕವಾದ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿಯನ್ನು 2014-15ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ. ಕಾಮಗಾರಿಯಲ್ಲಿನ ಡೊಮೆಸ್ಟಿಕ್ ಮೀಟರ್ ಹಾಗೂ ಮೀಟರ್ ಬಾಕ್ಸಗಳನ್ನು ಉಗ್ರಾಣ ಶಾಖೆಯಲ್ಲಿ ಸಂರಕ್ಷಿಸಿ, ಸಂತ್ರಸ್ಥರು ಮನೆ ನಿರ್ಮಿಸಲು ಅನುಮತಿ ಪತ್ರ ಪಡೆಯುವ ಸಮಯದಲ್ಲಿ ಅವರಿಗೆ ಡೊಮೆಸ್ಟಿಕ್ ಮೀಟರ್ ಹಾಗೂ ಮೀಟರ್ ಬಾಕ್ಸಗಳನ್ನು ವಿತರಿಸಲು ಕ್ರಮ ವಹಿಸಲಾಗುವುದು. ಅಂತೆಯೇ ಸಂತ್ರಸ್ಥರಿಗೆ ಉಗ್ರಾಣದಲ್ಲಿ ಸಂಗ್ರಹಿಸಿದ 11,000 ಡೊಮೆಸ್ಟಿಕ್ ಮೀಟರ್‌ಗಳಲ್ಲಿ ಈಗಾಗಲೇ 502 ವಾಟರ ಮೀಟರ್‌ಗಳನ್ನು ರಿಜಿಸ್ಟರನಲ್ಲಿ ದಾಖಲಿಸಿ, ವಿತರಿಸಲಾಗಿದೆ.

ಬಾಗಲಕೋಟೆ ನವನಗರದ ಯುನಿಟ್-1 & 2 ರಲ್ಲಿ ಒಟ್ಟು 17 ಜಲ ಸಂಗ್ರಹಗಾರಗಳಿದ್ದು, ವಾಲ್ವಗಳನ್ನು ಅವಶ್ಯಕತೆಗೆ ತಕ್ಕಂತೆ ಉಪಯೋಗಿಸಿದ ಕೂಡಲೇ ವಿವರಗಳನ್ನು ರಿಜಿಸ್ಟರನಲ್ಲಿ ದಾಖಲಿಸಿ ಅಚ್ಚುಕಟ್ಟಾಗಿ ನಿರ್ವಹಿಸಲಾಗುತ್ತಿದೆ. ಸಂತ್ರಸ್ಥರಿಗೆ ನೀರು ಸರಬರಾಜು ಯೋಜನೆಯಲ್ಲಿ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಉಗ್ರಾಣ ಶಾಖೆಯಲ್ಲಿ ಸಂಗ್ರಹಿಸಲಾದ ಸಾಮಗ್ರಿಗಳನ್ನು ಅವಶ್ಯಕತೆಗೆ ತಕ್ಕಂತೆ ಉಪಯೋಗಿಸಲಾಗುತ್ತಿದ್ದು, ಯಾವುದೇ ವಸ್ತುಗಳನ್ನು ಹಾಳಾಗದಂತೆ ನೋಡಿಕೊಳ್ಳಲಾಗುತ್ತಿದೆ.

ನವನಗರದ ಯುನಿಟ್-1ರಲ್ಲಿ ಎಲ್ಲ ಲೇಔಟ್ ನಿರ್ಮಾಣ ಮುಕ್ತಾಯಗೊಂಡಿದ್ದು, ಯುನಿಟ್-2ರಲ್ಲಿ ಎಲ್ಲ ಸೆಕ್ಟರಗಳಲ್ಲಿ ಲೇಔಟ್ ನಿರ್ಮಾಣ ಬಹುತೇಕ ಮುಕ್ತಾಯಗೊಂಡಿದ್ದು, ಹೆಚ್ಚುವರಿ 10 ಸೆಕ್ಟರಗಳಲ್ಲಿ ಮಾತ್ರ ವಿದ್ಯುತ್ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಉಳಿದಂತೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ನವನಗರದ ಯುನಿಟ್-2 ರಲ್ಲಿ ವಿದ್ಯುತ್ ಪರಿವರ್ತಕಗಳ ಸುತ್ತ ಅಳವಡಿಸಿರುವ ತಂತಿ ಬೇಲಿ ಹಾಗೂ ಕಾಂಕ್ರೀಟ್ ಕಾಮಗಾರಿಯು ಸುಸ್ಥಿತಿಯಲ್ಲಿರುತ್ತವೆ.

ಬಾಗಲಕೋಟ ನವನಗರದ ಯುನಿಟ್-1 ರಲ್ಲಿ ಫೆರಿಫೆರಲ್ ರಸ್ತೆಗಳಲ್ಲಿ ಪುಟ್‌ಪಾತ್‌ಗಳಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ಬೆಳೆಸಿದ್ದು ಹಾಗೂ ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿರುತ್ತದೆ. ಯುನಿಟ್-1 ರಲ್ಲಿರಸ್ತೆ ಬದಿ ಪುಟ್‌ಫಾತ್‌ನಲ್ಲಿ ನೆಡಲಾದ ಯಾವುದೇ ಗಿಡಗಳನ್ನು ತೆರವುಗೊಳಿಸಲಾಗಿರುವುದಿಲ್ಲ. ಯುನಿಟ್-1 & 2 ರಲ್ಲಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿರುತ್ತದೆ.

ಯುನಿಟ್-1 ರಲ್ಲಿ ಪುಟ್‌ಪಾತ್‌ಗಳನ್ನು ಪಾದಚಾರಿಗಳು ಉಪಯೋಗಿಸುತ್ತಿರುವ ಬದಲಾಗಿ ಪುಟ್‌ಫಾತ್‌ಗಳಲ್ಲಿ ಡಬ್ಬಾ ಅಂಗಡಿಗಳನ್ನು ಇಟ್ಟುಕೊಳ್ಳುವುದು ಹಾಗೂ ಮನೆ ಕಟ್ಟಡದ ಸಾಮಗ್ರಿಗಳನ್ನು ಸಂಗ್ರಹಿಸುತ್ತಿರುವುದರಿಂದ ಅವುಗಳನ್ನು ತೆರವುಗೊಳಿಸುವುದು ಪ್ರಾಧಿಕಾರಕ್ಕೆ ತುಂಬಾ ಸಮಸ್ಯಾತ್ಮಕ ಕೆಲಸವಾಗಿತ್ತು. ಭವಿಷ್ಯದಲ್ಲಿ ಪಾದಚಾರಿಗಳ ಸಂಖ್ಯೆ ಹೆಚ್ಚಾಗಿ ಅವಶ್ಯಕತೆ ಬಿದ್ದಲ್ಲಿ ರಸ್ತೆಯ ರಡು ಬದಿಗಳಲ್ಲಿ ಇರುವ ಬದಿ ಚರಂಡಿಗಳ ಮೇಲೆ ಕಾಂಕ್ರೀಟ್ ಸ್ಲ್ಯಾಬ್ ಹಾಕಿ ಪಾದಾಚಾರಿಗಳಿಗೆ ಪುಟ್‌ಫಾತ್‌ನಂತೆ ಉಪಯೋಗಿಸಬಹುದಾಗಿದ್ದರಿಂದ ಚರಂಡಿ ಮೇಲೆ ಸ್ಲ್ಯಾಬ್ ನಿರ್ಮಿಸಲಾಗಿರುತ್ತದೆ. ಎತ್ತರಿಸಿದ ಪುಟ್‌ಫಾತ್‌ಗಳನ್ನು ಕ್ಯಾರೇಜ್ ವೇ ಮಟ್ಟಕ್ಕೆ ಇಳಿಸಿದ್ದರಿಂದ ವಾಹನಗಳ ಪಾರ್ಕಿಂಗ್‌ಗೆ ಅನುಕೂಲವಾಗಿ ವಾಹನಗಳ ಸಂಚಾರ ಸುಗಮವಾಗುತ್ತದೆ. ಆದ್ದರಿಂದ ಪುಟ್‌ಪಾತ್‌ಗಳನ್ನು ರಸ್ತೆ ಮಟ್ಟಕ್ಕೆ ಇಳಿಸಿ ನಿರ್ಮಿಸಲಾಗಿರುತ್ತದೆ.

ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ನಿಯೋಜನೆ ಮುಂದುವರೆಸಲು ಸರ್ಕಾರದ ಆದೇಶವಾಗಿದ್ದು, ಅದರಂತೆ ಬಾಕಿ ಇರುವ ಎಲ್ಲ ವೇತನವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಧಿಕಾರಿಗಳ ಕರ್ತವ್ಯದಲ್ಲಿ ಯಾವುದೇ ಅಕ್ರಮವಾಗಿರುವುದಿಲ್ಲ. ವಿದ್ಯುತ್ ಕಾಮಗಾರಿಯ ಪ್ರತಿ ಹಂತದಲ್ಲಿಯು ಗುಣಮಟ್ಟ ಕಾಪಾಡಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಯುನಿಟ್-2 ರಲ್ಲಿ ಇಲ್ಲಿಯವರೆಗೆ ಒಟ್ಟು 400 ಕಟ್ಟಡಗಳಿಗೆ ವಿದ್ಯುತ್ ಸಂಪರ್ಕವನ್ನು ವಿದ್ಯುತ್ ಭೂಗರ್ಭ ಜಾಲದ ಮುಖಾಂತರವೇ ಕಲ್ಪಿಸಲಾಗಿದೆ ಹಾಗೂ ಭೂಗರ್ಭ ಜಾಲವನ್ನು ಸಮರ್ಪಕವಾಗಿ

ನಿರ್ವಹಿಸಲಾಗುತ್ತಿದೆ. ವಿದ್ಯುತ್ ನಿರ್ಮಾಣ ಯೋಜನೆಯನ್ನು ಹೆಸ್ಕಾಂ ಇಲಾಖೆಯವರ ಸುರ್ಪದಿಯಲ್ಲಿಯೇ ಕ್ರಮ ಕೈಗೊಳ್ಳಲಾಗಿರುತ್ತದೆ.

ಕಾಮಗಾರಿಗಳನ್ನು ಪಾರದರ್ಶಕವಾಗಿಯೇ ಟೆಂಡರ ಮೂಲಕ ಗುತ್ತಿಗೆ ನೀಡಲಾಗುತ್ತಿದ್ದು, ನಿರ್ಮಾಣದ ಸಮಯದಲ್ಲಿ ಅಧಿಕಾರಿಗಳ ಪರಿವೀಕ್ಷಣೆಯೊಂದಿಗೆ ಹಾಗೂ Third Paty Inspection ದೊಂದಿಗೆ ಮತ್ತು ಗುಣ ನಿಯಂತ್ರಣ ಇಲಾಖೆಯವರಿಂದ ಗುಣಮಟ್ಟವನ್ನು ಪರೀಕ್ಷಿಸಿ ಗುಣಮಟ್ಟವನ್ನು ಕಾಯ್ದುಕೊಂಡು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಕಾಮಗಾರಿಯ ಹಾಗೂ ಗುಣಮಟ್ಟ ಇವುಗಳಲ್ಲಿನ ಲೋಪದೋಷಗಳ ಬಗ್ಗೆ ಯಾವುದೇ ನಿರ್ದಿಷ್ಟ ದೂರುಗಳು ಬಗ್ಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಇಲಾಖೆ ಗಮನಕ್ಕೆ ತಂದಲ್ಲಿ ಅವುಗಳ ಬಗ್ಗೆ ಪರಿಶೀಲಿಸಿ, ನಿಯಮಾನುಸಾರ ಕ್ರಮ ವಹಿಸಲಾಗುವುದು.

ಜಸಂಇ 150 ಡಬ್ಲ್ಯೂಬಿಎಂ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು